NATIONAL DAIRY DEVELOPMENT BOARD

# ಉಣ್ಣಿಗಳ ನಿಯಂತ್ರಣಕ್ಕೆ ಏಕ-ಸ್ವಾಸ್ಥ್ಯ (ಒನ್ ಹೆಲ್ತ್) ವಿಧಾನ

## ಉಣ್ಣಿಗಳ ನಿಯಂತ್ರಣ ಏಕೆ ಅಗತ್ಯ?

- ☑ ಉಣ್ಣಿಗಳು ಅನಾಪ್ಲಾಸ್ಮಾಸಿಸ್, ಥೈಲೇರಿಯೊಸಿಸ್ ಮತ್ತು ಬಬೇಸಿಯೋಸಿಸ್ ನಂತಹ ಮಾರಕ ರೋಗಗಳನ್ನು ಹರಡುತ್ತವೆ.
- ☑ ಅತಿಯಾಗಿ ಆವರಿಸಿದಲ್ಲಿ ರಕ್ತಹೀನತೆ, ದುರ್ಬಲ ರೋಗನಿರೋಧಕ ಶಕ್ತಿ ಮತ್ತು ತೀವ್ರ ಉತ್ಪಾದನಾ ನಷ್ಟಕ್ಕೆ ಕಾರಣವಾಗುತ್ತದೆ.
- ☑ ಉಣ್ಣಿ ಕಡಿತದಿಂದಾಗುವ ಅಲರ್ಜಿಯಿಂದ ತೀವ್ರ ಅಸ್ವಸ್ಥತೆ ಉಂಟಾಗುತ್ತದೆ.
- ☑ ಒಮ್ಮೆ ಆವರಿಸಿದಲ್ಲಿ ಭಾರಿ ಸಂಖ್ಯೆಯಲ್ಲಿ ಮೊಟ್ಟೆ ಹಾಕುವುದರಿಂದ (ಪ್ರತಿ ಉಣ್ಣಿಯು ಸುಮಾರು 3000), ನಿಯಂತ್ರಣ ಕಷ್ಟಕರ.
- ☑ ಉಣ್ಣಿಗಳು ಮನುಷ್ಯರಲ್ಲೂ ರೋಗ ಹರಡಿಸಬಹುದು. ಉಣ್ಣಿ ಕಡಿತ ಕ್ರಿಮಿಯನ್ ಕಾಂಗೋ ರಕ್ತಸ್ರಾವ ಜ್ವರ (CCHF) ನಂತಹ ಗಂಭೀರ ರೋಗಗಳನ್ನು ಉಂಟುಮಾಡುತ್ತದೆ

ಉಣ್ಣಿ ಹುಳಗಳು ಪಶುವಿನ ಶರೀರದ ಮೇಲೆ ಹರಿದು ಹಬ್ಬಿಕೊಂಡು ಮರಿ ಉಣ್ಣಿಯಾಗಿ ಬೆಳೆಯುತ್ತದೆ



### ನಿಯಂತ್ರಣ ಕ್ರಮಗಳು:

- ನಿಯಮಿತವಾಗಿ, ವಿಶೇಷವಾಗಿ ಬೆಚ್ಚಗಿನ ಮತ್ತು ತೇವಾಂಶ ಹೆಚ್ಚಿಗಿರುವ ತಿಂಗಳುಗಳಲ್ಲಿ, ಜಾನುವಾರುವಿನ ಕುತ್ತಿಗೆ, ಕೆಚ್ಚಲು, ಜನನಾಂಗ ಮತ್ತು ಗುದದ್ವಾರದ ಸುತ್ತ ಕೈಯಾಡಿಸಿ ಪರಿಶೀಲಿಸುತ್ತಿರಬೇಕು

### ನಿಯಂತ್ರಣ ಕ್ರಮಗಳು:

- ದನ-ಕರುಗಳು ಉಣ್ಣಿ-ಸೋಂಕಿತ ಹುಲ್ಲುಗಾವಲುಗಳಲ್ಲಿ ಅಲೆದಾಡುವುದನ್ನು ತಪ್ಪಿಸಿ
- ದನ ಮೇಯಿಸುವ ಹುಲ್ಲುಗಾವಲು-ಗೋಮಾಳಗಳನ್ನು ಆಗಾಗ ಬದಲಿಸುತ್ತಿರಿ

## ಜಾನುವಾರುವಿನಲ್ಲಿ ಉಣ್ಣಿಯ ಜೀವನ ಚಕ್ರದ ಹತೋಟಿ ಕ್ರಮಗಳು



ಮೊಟ್ಟೆಗಳು ಹೊಡೆದು ಅದರಿಂದ ಹೊರ ಬಂದ ಉಣ್ಣಿ-ಹುಳಗಳು ಹುಲ್ಲುಗಳ ಮೇಲೇರಿ ಎಲೆಯ ತುದಿಗಳಲ್ಲಿ ಗುಂಪು ಗೂಡಿರುತ್ತದೆ



ಮರಿ-ಉಣ್ಣಿಗಳು ಸುಮಾರು 3 ವಾರಗಳ ಕಾಲ ರಕ್ತವನ್ನು ಹೀರಿ, ಕೆಳಗೆ ಬಿದ್ದು, ಮೊಟ್ಟೆಯನ್ನು ಹಾಕಿದ ನಂತರ ಸತ್ತು ಹೋಗುತ್ತವೆ

### ನಿಯಂತ್ರಣ ಕ್ರಮಗಳು:

- ಉಣ್ಣಿಯನ್ನು ತಿನ್ನುವ ದೇಸಿ ಕೋಳಿಗಳನ್ನು ಸಾಕಿರಿ
- ನಿಯಮಿತವಾಗಿ ಉಣ್ಣಿ-ಸೋಂಕಿತ ಜಾನುವಾರು ಮತ್ತು ಸ್ಥಳಗಳಿಂದ ಉಣ್ಣಿಗಳನ್ನು ನಿರ್ಮೂಲಿಸಿ
- ಯಾವಾಗಲೂ ಹೊಸದಾಗಿ ಖರೀದಿಸಿದ ಜಾನುವಾರುವನ್ನು ಹಿಂಡಿಗೆ ಸೇರಿಸುವ ಮೊದಲು ಅದರ ಮೇಲಿರುವ ಉಣ್ಣಿಗಳ ನಿರ್ಮೂಲನೆ ಕಾರ್ಯ ಕೈಗೊಳ್ಳಿ
- ಪಾರಂಪರಿಕ ಔಷಧ ಉಪಯೋಗಿಸಿ ಮತ್ತು ಆಗಾಗ ಉಣ್ಣಿ-ನಾಶಕ ಔಷಧಿಗಳನ್ನು ಬದಲಿಸಿ, ಉಣ್ಣಿಗಳಲ್ಲಿ ಔಷಧಿ ಪ್ರತಿರೋಧಕ ಶಕ್ತಿ ಬೆಳೆಯುವುದನ್ನು ತಪ್ಪಿಸಿ



### ನಿಯಂತ್ರಣ ಕ್ರಮ:

- ನಿಯಮಿತವಾಗಿ ಉಣ್ಣಿಗಳ ನಿರ್ಮೂಲನೆ ಕಾರ್ಯ ಕೈಗೊಳ್ಳಿ

ರಕ್ತ ಕುಡಿದು ಬಾತುಕೊಂಡಿರುವ ಪ್ರತಿ ಉಣ್ಣಿಯು ಸುಮಾರು 3000 ಮೊಟ್ಟೆಗಳನ್ನು ಇಡಬಹುದು

## ಆರ್ಥಿಕ ಪ್ರಭಾವ

### ಉಣ್ಣಿಗಳನ್ನು ನಿಯಂತ್ರಿಸದಿದ್ದಲ್ಲಿ

- ತೂಕ ನಷ್ಟ
- ರೋಗನಿರೋಧಕ ಶಕ್ತಿ ಕಡಿತ
- ಲಸಿಕೆ ವೈಫಲ್ಯ
- ಉಣ್ಣಿಗಳು ಹರಡಿಸುವ ರೋಗಗಳಿಂದ (ಬಬೇಸಿಯಾ, ಥೈಲೇರಿಯಾ, ಅನಾಪ್ಲಾಸ್ಮಾ) ಸಾವಿನ ಅಪಾಯ ಹೆಚ್ಚಳ
- ಹಾಲು ಉತ್ಪಾದನೆಯಲ್ಲಿ ನಷ್ಟ
- ಚಿಕಿತ್ಸಾ ವೆಚ್ಚದಲ್ಲಿ ಹೆಚ್ಚಳ
- ಪ್ರಾಣಿಗಳಿಂದ ಮನುಷ್ಯರಿಗೆ ಬರುವ ರೋಗಗಳ (ಝೂನೋಸಿಸ್) ಅಪಾಯ (ಉದಾರಣೆ- CCHF)
- ಉಣ್ಣಿಗಳ ಕಡಿತದಿಂದ ಚರ್ಮದ ಅಲರ್ಜಿ
- ಪಶುಗಳ ಯೋಗಕ್ಷೇಮದಲ್ಲಿ ಕುಸಿತ
- ಸುತ್ತಮುತ್ತಲಿನ ಹಿಂಡುಗಳಲ್ಲಿ ಉಣ್ಣಿಗಳ ಸೋಂಕು ಹರಡುವಿಕೆಗೆ ಮೂಲ

### ಉಣ್ಣಿಗಳ ನಿಯಂತ್ರಣದೊಂದಿಗೆ

- ☑ ಮೇವು ಪರಿವರ್ತನೆಯಲ್ಲಿ ಸುಧಾರಣೆ
- ☑ ರೋಗನಿರೋಧಕ ಶಕ್ತಿ ಮತ್ತು ಹಿಂಡುಗಳ ಆರೋಗ್ಯ ಸುಧಾರಣೆ
- ☑ ಉಣ್ಣಿಗಳು ಹರಡಿಸುವ ರೋಗಗಳ ಅಪಾಯ ಕಡಿತ
- ☑ ಹಾಲು ಉತ್ಪಾದನೆಯಲ್ಲಿ ಸುಧಾರಣೆ
- ☑ ಚಿಕಿತ್ಸಾ ವೆಚ್ಚದಲ್ಲಿ ಕಡಿತ
- ☑ ಪ್ರಾಣಿಗಳಿಂದ ಮನುಷ್ಯರಿಗೆ ಬರುವ ರೋಗಗಳ
- ☑ (ಝೂನೋಸಿಸ್) ಅಪಾಯ ಕಡಿತ ಪಶುಗಳ ಯೋಗಕ್ಷೇಮದಲ್ಲಿ ಸುಧಾರಣೆ

**ಇಂದೇ ಉಣ್ಣಿ ನಿಯಂತ್ರಣವನ್ನು ಪ್ರಾರಂಭಿಸಿ!**

ವಿಡಿಯೋವನ್ನು ವೀಕ್ಷಿಸಲು ಈ ಕ್ಯೂ. ಆರ್. ಕೋಡನ್ನು ಸ್ಕ್ಯಾನ್ ಮಾಡಿ